## ವೈ-ಫೈ ಅನ್ವೇಷಕ




ಪಯಣಿಸುತ್ತಿದ್ದೀರಾ? ವೈ-ಫೈ ಹಾಟ್‌ಸ್ಪಾಟ್ ಅಗತ್ಯವಿದೆಯಾ? ಚಿಂತೆ ಬೇಡ. ಈ ಉಚಿತ ವೈ-ಫೈ ಅನ್ವೇಷಕ ಸಮೀಪ ಇರುವ ವೈ-ಫೈ ಪ್ರದೇಶವನ್ನು ಹುಡುಕಲು ಐಫೋನ್ ಮತ್ತು ಆ್ಯಂಡ್ರಾಯ್ಡ್ ಬಳಕೆದಾರರಿಗೆ ನೆರವು ನೀಡುತ್ತದೆ.

ಜಗತ್ತಿನಾದ್ಯಂತ 144 ದೇಶಗಳ 6.5 ಲಕ್ಷ ಪ್ರದೇಶಗಳಲ್ಲಿ ಇದು ಲಭ್ಯವಿದ್ದು ಪ್ರಯಾಣದಲ್ಲಿದ್ದಾಗಲೂ ನೀವು ವೈ-ಫೈ ಜೊತೆ ಸಂಪರ್ಕ ಸಾಧಿಸಬಹುದು. ನಿಮ್ಮ ಫೋನ್‌ನಲ್ಲಿರುವ ಜಿಪಿಎಸ್ ವ್ಯವಸ್ಥೆಯನ್ನು ಚಾಲೂ ಇಡಿ. ವೈ-ಫೈ ಅನ್ವೇಷಕವು ಸಮೀಪದಲ್ಲಿರುವ ವೈ-ಫೈ ಸಂಪರ್ಕ ಪ್ರದೇಶವನ್ನು ಕ್ಷಿಪ್ರವಾಗಿ ಪತ್ತೆ ಮಾಡುತ್ತದೆ. ಹೇಗೆ ಅಲ್ಲಿಗೆ ಹೋಗಬೇಕೆಂಬುದನ್ನೂ ಹೇಳುತ್ತದೆ. ಜೊತೆಗೆ ಅದು ಉಪಾಹಾರಗೃಹವೋ, ಕಾಫಿ ಬಾರ್, ಹೊಟೇಲ್.. ಒಟ್ಟಿನಲ್ಲಿ ಯಾವುದೆಂಬುದನ್ನೂ ಕೂಡಾ ಪ್ರಚುರಪಡಿಸುತ್ತದೆ. ನಿಮಗೆ ಬೇಕಾದ ಪ್ರದೇಶವನ್ನು ಗುರುತು ಮಾಡಿದ ನಂತರ ಅಲ್ಲಿಯ ಫೋನ್ ನಂಬರ್ ಅನ್ನು ಕೂಡಾ ತಿಳಿಸುತ್ತದೆ. ಆರಾಮವಾಗಿ ಅಲ್ಲಿಗೆ ಹೋಗಿ ಕಾಫಿ ಹೀರುತ್ತ ನೆಟ್ ಬಳಸಬಹುದು.

## ಟ್ವಿಟ್ಟರ್ ನೆರವು

ಜನಪ್ರಿಯ ಮೈಕ್ರೋಬ್ಲಾಗ್ ವೆಬ್‌ಸೈಟ್ ಟ್ವಿಟ್ಟರ್, ಐಫೋನ್ ಅಪ್ಲಿಕೇಶನ್ನಿನ ನೂತನ ಹಾಗೂ ಪರಿಷ್ಕೃತ ರೂಪವನ್ನು ಹೊರತರಲು ಉದ್ದೇಶಿಸಿದೆ. ಇದು ಐಫೋನ್ ಆವೃತ್ತಿ 4.3ಕ್ಕೆ ಅನ್ವಯಿಸುತ್ತದೆ. ನೀವು ಅನುಸರಿಸುವ ಟ್ವೀಟ್‌ಗಳಿಗೆ ಸೂಚನೆಯನ್ನು ಈ ಅಪ್ಲಿಕೇಶನ್ ನೀಡುತ್ತದೆ. ಹೊಸ ಸುದ್ದಿ ಸಿಕ್ಕಾಗ ಎಚ್ಚರಿಸುತ್ತದೆ. ಪಾಸ್‌ವರ್ಡ್ ಅಗತ್ಯವಿರುವ ಕಡೆ ಉತ್ತಮ ಬೆಂಬಲ ಇದರಿಂದ ಲಭ್ಯ. ಇದು ನೇರವಾಗಿ ಬೇರೆಯವರ ಪ್ರೊಫೈಲ್‌ಗೆ ನಿಮ್ಮನ್ನು ಒಯ್ಯುತ್ತದೆ. ಜೊತೆಗೆ ಆಟೋಕಂಪ್ಲೀಟ್‌ನಲ್ಲಿ ಸುಧಾರಿತ ರೂಪ ನೀಡಲಿದೆ. ಟ್ವೀಟ್‌ನಲ್ಲಿ ಕೆಲವು ಕಡೆ ಇದು ಪರಸ್ಪರ ಹಂಚಿಕೊಳ್ಳಬಹುದಾದ ಬರಹಗಳಲ್ಲಿ ಸುಧಾರಣೆ ತರಲಿದೆ.

## ಕೆಟ್ಟ ಪ್ರೇಮಿಯಿಂದ ಪಾರಾಗಬೇಕೆ?

ಸ್ನೇಹವು ಕೆಟ್ಟ ಅನುಭವ ನೀಡುತ್ತಿದೆಯಾ? ಪ್ರೇಮಿಯನ್ನು ದೂರ ಇಡಲು ಮನಸ್ಸು ಪ್ರೇರೇಪಿಸುತ್ತಿದೆಯಾ? ಇಂಥವರ ನೆರವಿಗೆ 'ಬ್ಯಾಡ್ ಡೇಟ್ ರೆಸ್ಕ್ಯೂ' ಅಪ್ಲಿಕೇಶನ್ ಬಂದಿದೆ. ಒಳ ಬರುವ ಕರೆಯನ್ನು ಇದು ನಿಯಂತ್ರಿಸುತ್ತದೆ. ಡೇಟಿಂಗ್ ವೆಬ್‌ಸೈಟ್ eharmony.com ಇದನ್ನು ಆರಂಭಿಸಿದೆ. ಬೇಡದ ಸಂಬಂಧದಿಂದ ಆಚೆ ಬರಬೇಕು ಎನ್ನುವ ಮನಸ್ಸುಳ್ಳವರು ತಮ್ಮ ಪ್ರೇಮಿಯ ಫೋನ್‌ಗೆ ಸಂಬಂಧ ಕಡಿದುಕೊಳ್ಳುವಂತಹ ಸಂದೇಶವನ್ನು ಕೂಡಾ ಕಳಿಸಬಹುದು. ಆದರೆ ತಮ್ಮ ಫೋನ್‌ನಿಂದ ನೇರವಾಗಿ ಅಲ್ಲ, ಈ ವೆಬ್‌ಸೈಟ್ ಮೂಲಕ ವ್ಯವಸ್ಥೆ ಮಾಡಬಹುದು.

## ಡೌನ್‌ಲೋಡ್‌ಗೆ ಐಡಿಎಂ




ನಿಮ್ಮ ಡೌನ್‌ಲೋಡ್ ನಿರ್ವಹಣೆಗೆ ಅತ್ಯಂತ ಸಮರ್ಥವಾದ ಟೂಲ್ ಎಂದರೆ ಇಂಟರ್‌ನೆಟ್ ಡೌನ್‌ಲೋಡ್ ಮ್ಯಾನೇಜರ್ (ಐಡಿಎಂ). ಡೌನ್ ಲೋಡ್ ವೇಗವನ್ನು ಐದು ಪಟ್ಟು ಜಾಸ್ತಿ ಮಾಡಬಹುದು. ಪುನಃ ಡೌನ್ ಲೋಡ್ ಮಾಡಬೇಕಾದರೂ ಇದು ನೆರವಿಗೆ ಬರುತ್ತದೆ.

ನೆಟ್‌ವರ್ಕ್ ಸಮಸ್ಯೆಯಿಂದ ಅಥವಾ ಕಂಪ್ಯೂಟರ್ ಶಟ್‌ಡೌನ್‌ನಿಂದಾಗಿ ಅರ್ಧಕ್ಕೇ ನಿಂತ ಡೌನ್‌ಲೋಡ್ ಪ್ರಕ್ರಿಯೆಯನ್ನು ಇದು ಪುನರಾರಂಭಿಸುತ್ತದೆ. ಇದರಲ್ಲಿರುವ ಸರಳವಾದ ಗ್ರಾಫಿಕ್ ಬಳಕೆ ಐಡಿಎಂ ಅನ್ನು ಬಳಕೆದಾರರ ಸ್ನೇಹಿಯನ್ನಾಗಿ ಮಾಡಿದೆ.

ಇದು ಪ್ರಾಕ್ಸಿ ಸರ್ವರ್, ಎಫ್‌ಟಿಪಿ, ಎಚ್‌ಟಿಟಿಪಿ ಪ್ರೊಟೊಕಾಲ್, ಫೈರ್ ವಾಲ್ಸ್, ಕುಕೀಸ್, ರೀಡೈರೆಕ್ಟ್, ಎಂಪಿ3 ಆಡಿಯೊ ಹಾಗೂ ಎಂಪಿಇಜಿ ವಿಡಿಯೋವನ್ನು ಕೂಡಾ ಬೆಂಬಲಿಸುತ್ತದೆ.

ಇಂಟರ್‌ನೆಟ್ ಎಕ್ಸ್‌ಪ್ಲೋರರ್, ಒಪೆರಾ, ಮೊಝಿಲ್ಲಾ ಫೈರ್‌ಫಾಕ್ಸ್ ಜೊತೆ ಸೇರಿ ನಿಮ್ಮ ಎಲ್ಲಾ ಬಗೆಯ ಡೌನ್‌ಲೋಡ್‌ಗಳನ್ನು ಆರಾಮವಾಗಿ ನಿರ್ವಹಿಸುತ್ತದೆ. ಫೈಲ್‌ಗಳನ್ನು ಡ್ರ್ಯಾಗ್ ಆ್ಯಂಡ್ ಡ್ರಾಪ್ ಮಾಡುವಾಗ ಐಡಿಎಂ ಬಳಸಬಹುದು. ಸಮಯವನ್ನು ನಿಗದಿಪಡಿಸಿದರೆ ಅದಕ್ಕೆ ಸರಿಯಾಗಿ ಇದು ಮೋಡೆಮ್‌ಗೆ ಡಯಲ್ ಮಾಡಿ ಫೈಲ್‌ಗಳನ್ನು ಡೌನ್‌ಲೋಡ್ ಮಾಡುತ್ತದೆ. ನಂತರ ಕಂಪ್ಯೂಟರ್ ಅನ್ನು ಶಟ್‌ಡೌನ್ ಮಾಡುತ್ತದೆ. ಮಾಹಿತಿಗೆ www.internetdownloadmanager.com

■ ಎಸ್.ತುಂಬೆ